## ಲೋಕೇಶ ಬರಲಿಲ್ಲ!

ಹಳ್ಳಿಯಿಂದ ಮಂಗಳೂರಿನ ಬಸ್ ನಿಲ್ದಾಣಕ್ಕೆ ಬಂದಿಳಿದ ಗೋಪಿ ಗೆಳೆಯ ಹರೀಶನಿಗೆ ಫೋನ್ ಮಾಡಿ ತಾನು ಬಂದಿರುವ ಸುದ್ದಿ ತಲುಪಿಸಿದ. ಹಾಗೇ ಆತನ ಮನೆಗೆ ಬರುವ ದಾರಿ ತಿಳಿದಿಲ್ಲವೆಂದೂ, ಬಸ್ ನಿಲ್ದಾಣಕ್ಕೆ ಆಗಮಿಸಿ ಕರೆದುಕೊಂಡು ಹೋಗುವಂತೆಯೂ ತಿಳಿಸಿದ.

ಆದರೆ ಹರೀಶ ತನ್ನ ಅಂಗಡಿಯಲ್ಲಿ ಗ್ರಾಹಕರಿರುವುದರಿಂದ ಬರಲು ಅಸಾಧ್ಯವೆಂದು ಅರುಹಿ, 'ಲೊಕೇಶನ್ನ ಕಳಿಸುವೆ, ಅಂಗಡಿಗೆ ಬಾ' ಎಂದ. ಗೋಪಿ ಸರಿಯೆಂದ. ನಾಲ್ಕು ಗಂಟೆ ಕಾದರೂ ಗೋಪಿ ಅಂಗಡಿಗೆ ಬಾರದ್ದರಿಂದ ಅನುಮಾನಗೊಂಡ ಹರೀಶ ಸ್ವಯಂ ಬಸ್ ನಿಲ್ದಾಣಕ್ಕೆ ಬಂದಾಗ ಗೋಪಿಯಿನ್ನೂ ಅಲ್ಲೇ ಕಾಯುತ್ತಿದ್ದ!

ಹರೀಶ ಕಾರಣ ಕೇಳಲು, 'ಕಾದು ಕಾದು ಸುಸ್ತಾಯ್ತು...ಆದರೆ ನೀನು ಕಳಿಸಿರುವ ಆ ಲೋಕೇಶ ಇನ್ನೂ ಬರಲಿಲ್ಲ ಮಾರಾಯ' ಎಂದ ಗೋಪಿ. 'ಮೊಬೈಲ್‌ನಲ್ಲಿ ಲೊಕೇಶನ್ ಕಳಿಸುತ್ತೇನೆ ಎಂದಿದ್ದೆ ನಾನು. ನಿನ್ನ ಮೊಬೈಲ್ ನೋಡಿದರೆ ಗೊತ್ತಾಗುತ್ತದೆ' ಎಂದು ಹರಿ ವಿವರಿಸಿದಾಗ, 'ಅದೇನೋ, ಮೊಬೈಲಲ್ಲಿ ಅದೆಲ್ಲಾ ನೋಡೋಕೆ ಬರಲ್ಲಾ ಕಣಯ್ಯಾ' ಎಂದು ತಲೆ ಕೊಡವುತ್ತಾ ಗೋಪಿ, ಹರೀಶನನ್ನು ಹಿಂಬಾಲಿಸಿದ!




**ರಮಣ್ ಶೆಟ್ಟಿ ರೆಂಜಾಳ್**

---




## ವ್ಯತ್ಯಾಸ ಅಷ್ಟೇ

ಪಿಂಕಿ ತನ್ನ ಪೋಷಕರೊಂದಿಗೆ ಊಟಕ್ಕೆ ನಾರ್ತ್ ಇಂಡಿಯನ್ ರೆಸ್ಟೋರೆಂಟಿಗೆ ಹೋಗಿದ್ದಳು. ಭರ್ಜರಿ ಊಟದ ನಂತರ ಕೈ ತೊಳೆದುಕೊಳ್ಳಲು ಫಿಂಗರ್ ಬೌಲ್ ತಂದಿಟ್ಟಿದ್ದರು. ಒಮ್ಮೆಲೇ ಪಿಂಕಿ ಜೋರಾಗಿ ಚೀರಿದಳು. 'ಹುಲಿ...ಹುಲಿ..' ಎಂದು ಕೂಗಿದಳು.

ಕುಳಿತಿದ್ದವರೆಲ್ಲ ಬೆದರಿ ಎದ್ದೆನೋ ಬಿದ್ದೆನೋ ಎಂಬಂತೆ ಹೋಟೆಲಿನ ಹೊರಗೋಡಿದರು. ಹೋಟೆಲ್ ಮ್ಯಾನೇಜರ್ ವೇಲುಸ್ವಾಮಿ ಪಿಸ್ತೂಲ್ ಹಿಡಿದು ಟೇಬಲ್ ಬಳಿ ಬಂದು 'ಎಲ್ಲಿ ಹುಲಿ ? ಎಲ್ಲಿ..?' ಎಂದ. ಬೌಲ್ ಒಳಗಿನ ನಿಂಬೆ ತುಂಡು ಬಾಯಿಗಿಟ್ಟುಕೊಂಡು ಅದರ ಹುಳಿಗೆ ಸಿಂಡರಿಸಿ ಪಿಂಕಿ ಕೂಗಿದ್ದಳು! ಅವಳು 'ಳ' ಬದಲು 'ಲ' ಎಂದು ಉಚ್ಚರಿಸುವುದನ್ನು ತಿಳಿದು ಮ್ಯಾನೇಜರ್ ನಗಲಾರಂಭಿಸಿದ.

**ಕೆ. ಶ್ರೀನಿವಾಸರಾವ್**